ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಬುಧವಾರ, ದಿನಾಂಕ : 03 ನೇ ಫೆಬ್ರುವರಿ, 2021

ಆದಿವಾಸಿ ಹಾಡಿಗಳಲ್ಲಿರುವ ಯಜಮಾನರುಗಳನ್ನು ಪೂಜಾರಿಗಳೆಂದು ಸೇರಿಸುವ ಬಗ್ಗೆ

ಶ್ರೀಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ):-

297 (285) ಮಾನ್ಯ ಮುಜರಾಯಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಆದಿವಾಸಿ ಬುಡಕಟ್ಟು ಜನರಿಗೆ ಅವರ ಸಂಸ್ಕೃತಿಯನ್ನು ಉಳಿಸಿಕೊಂಡು ಮುಂದುವರೆಯಲು ಮತ್ತು ಅವರುಗಳು ಪೂಜಿಸುವ ದೇವರುಗಳನ್ನು, ನಂಬಿಕೆಗಳನ್ನು ಉಳಿಸಲು ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು; (ವಿವರ ನೀಡುವುದು)

(ಆ) ಈ ಹಾಡಿಗಳಲ್ಲಿರುವ ದೇವರುಗಳನ್ನು ಪೂಜಿಸುವ ಮತ್ತು ಪೂಜೆಯನ್ನು ನಡೆಸುವ ಯಜಮಾನರುಗಳನ್ನು ಮುಜರಾಯಿ ಇಲಾಖೆಯ ಪೂಜಾರಿಗಳಿಗೆ ನೀಡುವ ಸೌಲಭ್ಯಗಳನ್ನು ನೀಡಲು ಸರ್ಕಾರದ ಕ್ರಮಗಳೇನು?(ವಿವರ ನೀಡುವುದು)